94

# ಪತಹಶೀಲ್ದಾರವರ ನ್ಯಾಯಾಲಯ ನಾಡ ಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾ.ಕ.ಗು/15/2014-15. ದಿನಾಂಕ:17-05-2016.

| ಅರ್ಜಿದಾರರು | ತಕರಾರುದಾರರು |
|---|---|
| 1)ಎಂ.ವೀರಮ್ಮ ಗಂಡ ಲೇಟ್ ಮಲ್ಲಿಕಾರ್ಜುನಪ್ಪ<br>2)ಬಸವರಾಜ<br>3)ಎಂ.ರತ್ನಮ್ಮ ಗಂಡ ಲೇಟ್ ಶರಣಪ್ಪ<br>ಎಂ ಬಿ ಅಯ್ಯನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರೀವಿಕ್ಷಕರು<br>ಗುಡೇಕೋಟೆ |
| ಕೂಡ್ಲಿಗಿ ತಾಲೂಕು ಮಾಕನಡುಕು ಗ್ರಾಮದ ಸನಂ 6ಎ ವಿಸ್ತೀರ್ಣ 9-47 ಎಕ್ರೆ ಜಮೀನನ್ನು ಪೋತಿ ವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಮಾಕನಡುಕು ಗ್ರಾಮದ ಸನಂ 6ಎ ವಿಸ್ತೀರ್ಣ 9-47 ಎಕ್ರೆ ಜಮೀನನ್ನು ಸದರಿ ತಾಲೂಕು. ಎಂ.ಬಿ.ಅಯ್ಯನಹಳ್ಳಿ ಗ್ರಾಮದ ಎಂ.ವೀರಮ್ಮ ಗಂಡ ಲೇಟ್ ಮಲ್ಲಿಕಾರ್ಜುನಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಮಾಕನಡುಕು ಇವರು ನಮೂನೆ-21 ರ ನೋಟಿಸನ್ನು ದಿನಾಂಕ 22-11-2013 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ. ವಂಶವೃಕ್ಷವು ವ್ಯತ್ಯಸ ಇರುವುದರಿಂದ ಈ ಪ್ರಕರಣದ ಎಂ.ಆರ್.ನಂಬರ್: 11/2013-14 ದಿನಾಂಕ 23-12-2013 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದೆಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 20-07-2014 ರಿಂದ 17-05-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆಯ ಸಮಯದಲ್ಲಿ ಅರ್ಜಿದಾರರು ಗೈರು ಹಾಜರಾಗಿರುತ್ತಾರೆ ಅರ್ಜಿದಾರರು ಮಾಕನಡುಕು ಗ್ರಾಮದ ಸನಂ 6ಎ. ವಿಸ್ತೀರ್ಣ 9-47. ಎಕ್ರೆ ಜಮೀನು ನನ್ನ ಗಂಡನಾದ ಮಲ್ಲಿಕಾರ್ಜುನಪ್ಪ ಇವರ ಹೆಸರಿಗೆ ಜಂಟಿ ಪಟ್ಟ ಲೆಕ್ಕದಾಖಲೆ ಇದ್ದು ಇವರು ದಿನಾಂಕ 12-01-2012 ರಂದು ನಿಧನ ಹೊಂದಿರುವ ಕಾರಣ ಪೋತಿ ವಾರಸು ಹಕ್ಕಿನ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಮಾತ್ರ ಸಲ್ಲಿಸಿದ್ದು ವಿಚಾರಣೆಗೆ ನೋಟಿಸು ಜಾರಿ ಮಾಡಲಾಗಿ ಅವರು ಹಾಜರಾಗಿ ಯಾವುದೇ ಹೇಳಿಕೆ ಮತ್ತು ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ವಿಚಾರಣೆಗೆ ಹಾಜರಾಗಿ ಯಾವುದೆ ಹೇಳಿಕೆಗಳನ್ನಗಲ್ಲಿ, ದಾಖಲೆಗಳನ್ನಗಲ್ಲಿ ನೀಡಿಲ್ಲದ ಕಾರಣ ಅವರ ಕೋರಿಕೆಯಾನ್ನು ತಳ್ಳಿಹಾಕಿ ಕೆಳಗಿನಂತೆ ಆದೇಶ ಮಾಡಲಾಗಿದೆ

-:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಸ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಮಾಕನಡುಕು ಗ್ರಾಮದ ಸನಂ 6ಎ. ವಿಸ್ತೀರ್ಣ 9-47. ಎಕ್ರೆ ಜಮೀನು ಅರ್ಜಿದಾರರು ವಿಚಾರಣೆಗೆ ಗೈರು ಹಾಜರಾಗಿರುವ ಕಾರಣ ಅರ್ಜಿದಾರರ ಕೋರಿಕೆಯನ್ನು ತಳ್ಳಿಹಾಕುತ್ತಾ ಯಥಸ್ಥಿತಿಯಂತೆ ಮುಂದುವರಿಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 17-05-2016. ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಗುಡೇಕೋಟೆ
ಗುಡೇಕೋಟೆ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಎಂ.ವೀರಮ್ಮ ಗಂಡ ಲೇಟ್ ಮಲ್ಲಿಕಾರ್ಜುನಪ್ಪ. ರತ್ನಮ್ಮ ಗಂಡ ಲೇಟ್ ಶರಣಪ್ಪ. ಬಸವರಾಜ ಎಂ.ಬಿ. [illegible] ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರೀವಿಕ್ಷಕರು ಗುಡೇಕೋಟೆ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕೆ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.